**ಓ ಎಸ್ ನಂಃ 120-2016** **ಪಿ ಡಬ್ಲ್ಯೂ - 1**

**ಸಾಕ್ಷಿಯನ್ನು ದಿನಾಂಕಃ 03.11.2023 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ** ಪ್ರತಿವಾದಿಗಳ ಪರ ಶ್ರೀ ಎಸ್ ಟಿ ಟಿ ವಕೀಲರಿಂದ

ನಿಪಿ15ನ್ನು ತಯಾರು ಮಾಡಲು ಪತ್ರವನ್ನು ಸಿದ್ದಪ್ಪ ತಂದಿರುತ್ತಾರೆ. ಚಾಪ ಕಾಗದವನ್ನು ಕಲಘಟಗಿಯಲ್ಲಿ ಖರೀದಿ ಮಾಡಿರುತ್ತಾರೆ. ನಿಪಿ15ನ್ನು ಬರೆಯಲು ಸಿದ್ದಪ್ಪ ಮಾಹಿತಿಯನ್ನು ಕೊಟ್ಟಿರುತ್ತಾನೆ. ನಿಪಿ15ನ್ನು ತಹಶೀಲ್ದಾರವರ ಕಚೇರಿಯಲ್ಲಿ ಬರೆಯಲಾಯಿತು. ಸದರಿ ದಾಖಲೆಯನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಚಿಕ್ಕಮಠರವರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ15ನ್ನು ಬರೆಯುವ ಕಾಲಕ್ಕೆ 4-5 ಜನ ಇದ್ದರು. ದಾವಾ ಆಸ್ತಿಯ ಕಬ್ಜೆ ನೀಡಿರುವ ಬಗ್ಗೆ ನಿಪಿ15ರಲ್ಲಿ ಬರೆದಿಲ್ಲ ಅಂದರೆ ಸರಿಯಲ್ಲ. ನಿಪಿ15ನ್ನು ಮೋಸದಿಂದ ಬರೆಸಿಕೊಂಡಿದ್ದೇನೆ ಅಂದರೆ ಸರಿಯಲ್ಲ. ಸುಳ್ಳು ದಾಖಲೆ ಆಧಾರದ ಮೇಲೆ ಸುಳ್ಳು ದಾವೆ ಹೂಡಿದ್ದೇನೆ ಅಂದರೆ ಸರಿಯಲ್ಲ. ಕ್ರಯ ಪತ್ರ ಬರೆದುಕೊಡಲು ಸಿದ್ದಪ್ಪನವರನ್ನು ಕೇಳಿದ್ದೆ. ಸಾಕ್ಷಿ ಮುಂದುವರೆದು ತದನಂತರ ಆತ ಮರಣ ಹೊಂದಿರುವುದಾಗಿ ನುಡಿಯುತ್ತಾರೆ. ಸಿದ್ದಪ್ಪನೇ ಬಂದು ನನ್ನ ಹೆಸರನ್ನು ಪಂಚಾಯಿತಿ ದಾಖಲೆಗಳಲ್ಲಿ ನಮೂದಿಸಿದ್ದಾನೆ. ಪಂಚಾಯಿತಿ ದಾಖಲೆಗಳು ಖೊಟ್ಟಿ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವೆಗೆ ಯಾವುದೇ ಕಾರಣ ಇಲ್ಲ ಅಂದರೆ ಸರಿಯಲ್ಲ. ನಿಪಿ7 ರಿಂದ 15 ನ್ನು ಸೃಷ್ಟಿಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**